ಆದಾಯಕ್ಕೆ ದಾರಿಮಾಡಿಕೊಡಿ ಎಂಬ ಆರ್ತ ಬೇಡಿಕೆಗೆ ಅಸಹಾಯಕರಾದರು. ಅಕ್ರಾಂನ ಅಂಗಡಿಗೆ ಹೋಗಿ ಸರಾಯಿ ಮುಂತಾದ್ದೆಲ್ಲ ಮಾರಬಾರದು, ಅಕ್ರಮ ದಂಧೆ ನಡಸಬಾರದು ಅಂತೆಲ್ಲ ಎಚ್ಚರಿಕೆ ಕೊಟ್ಟರು. ಅಂತದ್ದೇನೂ ಇಲ್ಲ. ಎಷ್ಟುಹೊತ್ತಿಗೂ ನೀವು ಬಂದು ನೋಡಬಹುದು ಅಂತ ದೈನ್ಯದಿಂದ ನಿವೇದಿಸಿಕೊಂಡ ಆತ. ಅದವರಿಗೂ ಗೊತ್ತಿತ್ತು.

ಒಂದು ವರ್ಷವಾಗುವಾಗ ಊರವರ ಯಾವುದೆ ಸಮಸ್ಯೆಯಿರಲಿ – ಪ್ರೇಮಪ್ರಕರಣ, ಗದ್ದೆ ಗಡಿತಂಟೆ, ಪಾಲುಜಗಳ, ಗಂಡಹೆಂಡಿರ ವಿರಸ ಕೊನೆಗೆ ತೋಟದ ಕೆಲಸಕ್ಕೆ ಜನ ಸಿಗದ್ದು ಸಹ ಅಕಾರಣ ಅಕ್ರಾಂನ ಅಂಗಡಿಯನ್ನು ಗುರಿಯಾಗಿಸುವುದರಲ್ಲಿ ನಿಲ್ಲುತ್ತಿತ್ತು. ಸಾವಕ್ಕ ಅಡಕೆ ಸುಲಿಯಲು ಬರದಿದ್ದದ್ದು ಅವಳಮೇಲಿನ ಸಿಟ್ಟನ್ನು ಹೆಚ್ಚಿಸಿತು. 'ಮುಕುಂದರಾಯರಲ್ವ ಅವನನ್ನು ಕರೆತಂದದ್ದು? ಅವನಿಗೆ ಅಂಗಡಿ ಹಾಕಲು ಸಾಮಾನು ಕೊಟ್ಟು ಹುರಿದುಂಬಿಸಿದ್ದಕ್ಕೆ ಈ ಸಾವಕ್ಕ ಜೋಡಿಯಾದ್ದು. ಒಂದಿನ ಅವನ ಜಾತಿಗೇ ಸೇರತಾಳೆ ಆಶ್ಚರ್ಯ ಬ್ಯಾಡ...' ಸಮಾರಾಧನೆ ಊಟದಲ್ಲಿ ಯಾರೋ ಜೋಶಿನಲ್ಲಿ ಹೇಳಿಬಿಟ್ಟರು. ಜಲಜಾಕ್ಷಿಗೆ ಉರಿದುಹೋಗಿ ರಾತ್ರಿ ಗಂಡನಜೊತೆ ಜಗಳವಾಡಿದಳು. ರಾಯರು ಮರುದಿನ ನಡೆದುಕೊಂಡೆ ಅಕ್ರಾಂನ ಅಂಗಡಿಗೆ ಹೋದವರು ಎಲ್ಲಾ ಹೇಳಿಕೊಂಡು ಹಗುರಾಗಲು ನೋಡಿದರೆ ಅಕ್ರಾಂ ಹನಿಗಣ್ಣಾಗಿ ಅವನ ಕತೆ ಹೇಳಿದ. ಈಗ ತಿಂಗಳಲ್ಲಿ ಮೂರುಬಾರಿಯಾಗಿತ್ತಂತೆ; ಅಪರಿಚಿತನೊಬ್ಬ ಬರತೊಡಗಿದ್ದ. ನೀನು ಯಾವ ಜಮಾತ್‌ಗೆ ಸೇರಿದವನು? ದಿನಾ ನಮಾಜು ಮಾಡತಿದೀಯ? ಇಂತಕಾಲ್ ಆದರೆ ದಫನ್ ಮಾಡಲು ಜಮಾತು ಬೇಡವ? ಕಾಫಿರ್ ಹೆಂಗಸಿನ ಜೊತೆ ಏನು ಸಂಬಂಧ ಅಂತೆಲ್ಲ ಕೇಳುತ್ತಾನಂತೆ. ಅಕ್ರಾಂ ಒಡಲತುಂಬಾ ಸಂಕಟವನ್ನೇ ತುಂಬಿಕೊಂಡಿದ್ದ. ಸುಮಾರುಹೊತ್ತು ಯೋಚನೆಗೆ ಬಿದ್ದ ಮುಕುಂದರಾಯರು ನಿಟ್ಟುಸಿರು ಬಿಟ್ಟು ತಮಗೆ ತಾವೇ ಹೇಳಿಕೊಂಡರು, 'ಇವನೇನೊ ರಾಜ್ಯವನ್ನೆಲ್ಲಾ ಸುತ್ತುತ್ತಿದ್ದೆ ಅಂದಿದ್ದ. ಬೇರೆ ಊರೇನೂ ಇವನಿಗೆ ಹೊಸದಲ್ಲ. ಈ ಸಾವಕ್ಕ ಬಹುಶಃ ಬೇರೆ ಜಿಲ್ಲೆಯೇನು ಪಕ್ಕದ ತಾಲ್ಲೂಕನ್ನೂ ನೋಡಿರಲಿಕ್ಕಿಲ್ಲ. ಅಲ್ಲಿ ಅವಳ್ಯಾರೋ ಏನೋ!...' ಅವನ ಗುಡಿಸಲಲ್ಲೆಲ್ಲ ಒಮ್ಮೆ ಕಣ್ಣು ಹಾಯಿಸಿದವರು ದೀರ್ಘಶ್ವಾಸ ಹೊರಗೆಡವಿದರು. ಎದ್ದು ಊರಕಡೆ ನಡೆಯತೊಡಗಿದರು. ಅಕ್ರಾಂ ವಿಸ್ಮಯದಿಂದ ನಡೆಯುತ್ತಿರುವ ರಾಯರ ಬೆನ್ನನ್ನೆ ನೋಡುತ್ತ ಕುಳಿತ. ರಾತ್ರಿ ಕೊನೆಯ ಗಿರಾಕಿಯೂ ಹೋದಮೇಲೆ ರಾಯರ ಮಾತು ಮತ್ತೆ ಕಾಡತೊಡಗಿತು.

ಮರುದಿನ ಮಧ್ಯಾಹ್ನ ಬಸ್ಸಿಗೆ ಬಂದವರು ಸುದ್ದಿತಂದರು: 'ಅಕ್ರಾಂನ ಅಂಗಡಿ, ಗುಡಿಸಲೆಲ್ಲ ಖಾಲಿ ಹೊಡೀತಿದೆ. ಸಾಮಾನುಸಮೇತ ಎಲ್ಲಿಗೋ ರಾತ್ರೋರಾತ್ರಿ ಓಡಿಹೋಗಿದ್ದಾನೆ' ಮತ್ತೊಬ್ಬರು ಆವೇಶದಲ್ಲಿ ಹೇಳಿದರು: 'ಅಷ್ಟೇ ಅಲ್ಲ, ಆ ಸಾವಕ್ಕನೂ ಕಾಣುತ್ತಿಲ್ಲ...'


### ಬನವಾಸಿ ವೆಂಕಟೇಶ ದೀಕ್ಷಿತ್

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್ ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ದೂರಸಂಪರ್ಕ ಇಲಾಖೆಯಲ್ಲಿ ಉಪಮಹಾಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಕಟಿತ ಕಥಾಸಂಕಲನ 'ಕಾವಡಿ'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.